# ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.)

ಶ್ರೀನಗರ, ಬೆಂಗಳೂರು-560050

## 2021-22ನೇ ಸಾಲಿನ ಕಾಜಾಣ ಪರೀಕ್ಷೆಯ ಪ್ರಶ್ನೆ ಪತ್ರಿಕೆ

**ಅವಧಿ : 3 ಗಂಟೆ** **ದಿನಾಂಕ :____________** **ಅಂಕಗಳು : 100**

(ಉತ್ತರಗಳು ನೇರವಾಗಿರಲಿ. ನಿಗದಿತ ಅಂಕಗಳನ್ನೂ ಸಮಯವನ್ನೂ ಗಮನದಲ್ಲಿರಿಸಿಕೊಂಡು ಉತ್ತರ ಬರೆಯಿರಿ.)

**1. ಕೆಳಗಿನ ಪದಗಳ ಅರ್ಥ ಬರೆಯಿರಿ (1/2 * 10 = 5)**

ದುರ್ವಾರ, ಸದಮಲ, ಭುಜಕೀರ್ತಿ, ಪೊಂಬುತ್ತಳಿ, ಜರೆದಪುದು, ನಾಲ್ದಿನಗಂಡು, ಎರೆಯ, ಪೂರಾಯಭುಕ್ತ, ಪುಚ್ಚವಣ, ಶಫರ

**2. ಬಿಟ್ಟ ಜಾಗವನ್ನು ತುಂಬಿಸಿ ಬರೆಯಿರಿ (1*5=5)**

1. ____________ ಇವರ ಅಂಕಿತ ಭೀಮೇಶ ಕೃಷ್ಣ.
2. ಮಂದಾನಿಲ ರಗಳೆಯ ಪ್ರತಿ ಸಾಲಿನಲ್ಲಿ ಒಟ್ಟು ______ ಮಾತ್ರೆಗಳಿರುತ್ತವೆ.
3. ಕುಂತಿಯ ಜನ್ಮದಾತನ ಹೆಸರು ____________.
4. "ಕರಿವರದ" ಎಂಬುದು __________ ಇವರ ಅಂಕಿತನಾಮ.
5. ಕುಮಾರವ್ಯಾಸ ಭಾರತ ಗ್ರಂಥದ ನಿಜವಾದ ಹೆಸರು __________

**3. ಸೂಕ್ತವಾಗಿ ಹೊಂದಿಸಿರಿ (1*5=5)**

| | | | |
|---|---|---|---|
| 1. | ಶ್ರೀಯನರಾತಿ ಸಾಧನ ಪಯೋನಿಧಿಯೊಳ್ | ಅ. | ಕುಮಾರವ್ಯಾಸ |
| 2. | ಒಂದು ಮುಖವೆಂಬುದೇಕೋರುದ್ರನುರುತರಂ | ಆ. | ಶಂಕರನಾರಾಯಣ |
| 3. | ಅಂತು ನಡನಡ ನಡುಗಿ ಜಲದೇವತೆಗಳಪ್ಪೊಡಂ | ಇ. | ರುದ್ರಾಕ್ಷಿಯ ರಗಳೆ |
| 4. | ದಿಟ್ಟಿಸಿದರೆವೆ ಸೀವುದಂಗೈ ಮುಟ್ಟಿದರೆ ಹುಗುಳಹುದು | ಈ. | ವಿಕ್ರಮಾರ್ಜುನ ವಿಜಯಂ |
| 5. | ಸೀತಾದರ್ಶನಂ | ಉ. | ಪಂಪ |

**4. ಸೂಚಿಸಿರುವ ಮೂರು ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ರಿಕ್ತಸ್ಥಳದಲ್ಲಿ ಬರೆಯಿರಿ. (1*5=5)**

| | | | | |
|---|---|---|---|---|
| 1. | ಪಯೋನಿಧಿ | ಅ. ಬಚ್ಚಿಟ್ಟ ನಿಧಿ | ಆ. ಕ್ಷೀರಸಾಗರ | ಇ. ಅಪಾಯ ತರುವ ನಿಧಿ |
| 2. | ಗುಣವ್ರಾತ | ಅ. ವ್ರತವನ್ನು ಹಿಡಿದವನು | ಆ. ಗುಣಗಳ ಸಮೂಹ | ಇ. ಗುಣವಂತ ವ್ಯಕ್ತಿ |
| 3. | ವೃಷಮಾರ್ಗ | ಅ. ಎತ್ತಿನಜಾಡು | ಆ. ಆಕಾಶಮಾರ್ಗ | ಇ. ದೇವಮಾರ್ಗ |
| 4. | ಕೋವಿದ | ಅ. ನಿಷ್ಣಾತ | ಆ. ಕಲಾವಿದ | ಇ. ಕೋವಿ ಹಿಡಿದ ಸೈನಿಕ |
| 5. | ಉರಗಪತಾಕ | ಅ. ಕರ್ಣ | ಆ. ಸುಯೋಧನ | ಇ. ಅಶ್ವತ್ಥಾಮ |

**5. ಗುಂಪಿಗೆ ಸೇರದ ಪದವನ್ನು ಗುರುತಿಸಿ (1*5=5)**

1. ಉತ್ತಮಾಂಗ, ಪದಪಂಕಜ, ಅಂಘ್ರಿಯುಗ, ಚರಣಕಮಲ
2. ಕನಕಮೌಳಿ, ವಜ್ರಕವಚ, ವಜ್ರಹಾರ, ಕರ್ಣಕುಂಡಲ
3. ಶೇಷಶಾಯಿ, ನಾಗಶಯನ, ನಾಗಭೂಷಣ, ಸಾಗರಶಯನ
4. ಸತ್ಯವತಿ, ಕುಂತಿ, ಗಾಂಧಾರಿ, ಶಕುಂತಲೆ
5. ನವರತ್ನ, ನವಧಾನ್ಯ, ನವರಸ, ನವವಧು

**6. ಒಂದು ವಾಕ್ಯದಲ್ಲಿ ಉತ್ತರಿಸಿ (1*5=5)**

1. ಅಷ್ಟಮೂರ್ತಿ ಎನ್ನುವುದು ಯಾರನ್ನು? ಏಕೆ?
2. ಕಂದರ್ಪನನ್ನು ಸಂಹರಿಸಿದ್ದು ಯಾರು? ಏಕೆ?
3. 'ಅಭಯಂಕರ' ಎಂದರೇನು?
4. 'ಎಲ್ಲೋ ಹುಡುಕಿದೆ ಇಲ್ಲದ ದೇವರ' ಈ ಭಾವಗೀತೆಯ ಇದರ ವಸ್ತುವೇನು?
5. 'ಅಹಿಧರನಭವಂ' ಇದರ ಅರ್ಥವೇನು?

**7. ಇವುಗಳಿಗೆ ಟಿಪ್ಪಣಿ ಬರೆಯಿರಿ (2*5=10)**

1. ಕಾವ್ಯವಾಚನದ ಲಕ್ಷಣಗಳು 2. ಗಮಕ ಕಲೆ 3. ತ್ರಿಪದಿ 4. ಸಾಂಗತ್ಯ 5. ನವರಸಗಳು

[*ಹಾಳೆಯನ್ನು ಮಗುಚಿ ನೋಡಿ*]

**8. ಸರಿ–ತಪ್ಪು ಎರಡನ್ನೂ ತಿಳಿಸಿ ಬರೆಯಿರಿ (2*5=10)**

1. ಕರಿಗಿರಿದಾಸರ "ರಾಮ ಮಂಗಳ" ಕೃತಿಯು ಚಂಪೂಶೈಲಿಯಲ್ಲಿದೆ.
2. ಶಿವನನ್ನು ವಿವರಿಸುವ ರುದ್ರಾಕ್ಷಿ ರಗಳೆಯು ಕನಕದಾಸರಿಂದ ರಚಿತವಾಗಿದೆ.
3. 'ಸೀತಾದರ್ಶನಂ' ಕಾವ್ಯದ ಕರ್ತೃ ಶಂಕರನಾರಾಯಣರಾಯರು
4. ಕುಂತೀದೇವಿಯು ಸೂರ್ಯದೇವನನ್ನು ಯಮುನಾತಟದಲ್ಲಿ ನಿಂತು ಪ್ರಾರ್ಥಿಸಿದಳು
5. 'ಒಳಗೆ ಬೆಳೆದುದು ವೈರಶಿಖಿ ಕಡೆಗಳಕೆ ಹಾಯ್ದುದು........' ಈ ಮಾತು ಪಂಪಭಾರತದಲ್ಲಿ ಬರುತ್ತದೆ.

**9. ಇವುಗಳನ್ನು ಸ್ಥೂಲವಾಗಿ ಉತ್ತರಿಸಿ / ವಿವರಿಸಿ (3*5=15)**

1. ಲೋಗರೆಂತುಂ ಬನ್ನಮಂ ಕಂಡವರಲ್ತು; ಐಸಿರಿಗೆ ಸರಿಯಿಲ್ಲಂ; ರನ್ನಂಗಳ್ಗೆ ನೆಲೆ.
2. ಆದರ್ಶ ಗಮಕಿ ಹೇಗಿರಬೇಕು?
3. ಭೀಮನಿಗೆ ದುರ್ಯೋಧನಾದಿಗಳು ಹೇಗೆ ಉಪದ್ರವ ಕೊಟ್ಟರು?
4. ಚಂಪೂಕಾವ್ಯದ ಶೈಲಿಯನ್ನೂ ಅನ್ಯ ಕಾವ್ಯಗಳ ಶೈಲಿಯನ್ನೂ ಹೋಲಿಸಿ ಬರೆಯಿರಿ?
5. ಕುಂತಿಗೆ ಐದು ವರಗಳು ಲಭ್ಯವಾದ ಪ್ರಸಂಗವನ್ನು ಕುರಿತು ಬರೆಯಿರಿ.

**10. ಈ ಪದ್ಯದ ಸಾರಾಂಶ–ಸಂದರ್ಭವನ್ನು ಬರೆಯಿರಿ. (5*1=5)**

ಅಗುಳ್ದಿರಲಾ ಕುಳಿಯೊಳ್ ತೊ
ಟ್ಟಗೆ ನಿಧಿಗಂಡಂತೆ ವಸುಧೆಗಸದಳಮಾಯ್ತಾ
ಮಗನಂದಮೆಂದು ಲೋಗರ್
ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್

**11. ಪದ್ಯಕ್ಕೆ ಪ್ರಸ್ತಾರ ಹಾಕಿ, ಛಂದಸ್ಸಿನ ಲಕ್ಷಣಗಳನ್ನು ವಿವರಿಸಿ. (10*1=10)**

ಅರಸ ಕೇಳ್ ಭೂಜಾತೆಯೆಂದೆನಿಪಳೀ ಶಿಶುವು
ಪರಮ ಸಾಕ್ಷಾಲ್ಲಕ್ಷ್ಮಿಯಾಗಿರ್ಪಳಿವಳ ನೀ
ನುರೆ ಪೋಷಿಪುದು ಶಿಶುವನೀಕೆಯಂ ವರಿಸುವಡೆ ಹರಚಾಪಮಂ ಭಂಗಿಪ
ನರರು ಬಹುದೆನುತೆ ಪಣವಿಡು ಧನುವನೇರ್ಕಟ್ಟಿ
ಮುರಿದವಂ ವಿಷ್ಣುವೇ! ಎಂದುಲಿದು ನಾರದಂ
ಮರೆಯಾಗೆ ಜನಕನುತ್ಸಾಹದಿಂ ಭಾಮಿನಿಗೆ ತಿಳಿಪಲ್ಕೆ ಧಾವಿಸಿದನು ॥

**12. ಈ ಕೆಳಗಿನ ಕವಿಗಳ ಪೈಕಿ ಯಾರಾದ ಇಬ್ಬರ ವ್ಯಕ್ತಿಚಿತ್ರವನ್ನು ತಿಳಿಸಿರಿ: (5*2=10)**

ಹರಿಹರ – ಕರಿಗಿರಿದಾಸರು – ಶಂಕರನಾರಾಯಣ – ಮುದ್ದಣ – ಜಿ.ಎಸ್.ಶಿವರುದ್ರಪ್ಪ

**13. ಹಳಗನ್ನಡದಲ್ಲಿನ ಗದ್ಯವನ್ನು ಹೊಸಗನ್ನಡಕ್ಕೆ ಅಂತರಿಸಿ (5*1=5)**

ಅಮರ್ದುಣಿಗೆಳವನಡಿದಾವರೆಯ ಬಂಡುಣಿಗಳ್, ಇಂತಿರೆ ಕುರಿವಾನಸರೆಮ್ಮಂ ಲೆಕ್ಕಿಪನೇ? ಪೆಣ್ಣೆ! ಆಯಿರ್ವರ ಪೆಸರನೆ ಕೇಳ್ದೊಡಂ ರೋಮಾಂಚಂ ಪುಟ್ಟುಗಂ; ಅದರೊಳುಂ ಪಿರಿಯನಿಂ ಪಿರಿದು, ಎಂತಿವರ ಪುಟ್ಟೊ, ಪುಟ್ಟಿಗೆಂತೆಂತು ಪೆಸರೊ, ಪೆಸರ್ಗೆಂತೆಂತು ಮೊಗಂಗಳೊ, ಮೊಗಂಗಳ್ಗೆಂತೆಂತು ಮೆಯ್ಯೊ, ಮೆಯ್ಗೆಂತೆಂತು ಬಲಮೊ, ಬಲಕ್ಕೆಂತೆಂತು ಬೀರಮೊ, ಮೇಣಾ ಬೀರಕಿನ್ನೆಂತೆಂತು ಪೆಂಪೊ ಕಾಣೆಂ.

**14. ಈ ಹಳಗನ್ನಡ ಗದ್ಯಭಾಗವನ್ನು ಪದವಿಭಾಗ ಮಾಡಿ ಬರೆಯಿರಿ (5*1=5)**

ಎಳವರೆಯದೊಳ್ ಆಟಕೆಂದು ಸೂರ್ಯಚಂದ್ರಮರಂ ತಾಳಮಾಗೆಪಿಡಿವಂ; ಕಡಲಂಕಲಂಕುವಂ; ಮತ್ತಂ ಬಲ್ಮೆಯಿನಾದ್ವೀಪದೊಳೆ ದೆಸೆಯಾಣ್ಮರನಟ್ಟಿ ಮರಳ್ಚಿಬಂದು ಪಿಡಿಯದೋಲ್ ಕಾಪಿಡುತೆ ತಾನಿಂದಿರನರಮನೆಯಂ ತನ್ನ ಬೀಡಾಗೆ ಕೊಂಡದರೊಳ್ ತನ್ನ ಬಳಗಂ ಕೂಡೆಯಾ ದ್ವೀಪಮನಾಳುತಿರ್ಪಂ. ಈತನಿರ್ಪಿನಾಡಂ ಬಣ್ಣಿಸಲಳವೆ? ತಾನೋರೊರ್ಮೆಯೋರೊಂದೆಡೆಯಂ ಪೋಳ್ಗೆಯ್ದಾಯೆಡೆಯ ಸಾರವಸ್ತುಗಳನುಯ್ದು ತನ್ನ ಪೊಳಲಂತುಂಬುವಂ.

* * * * *